ಯಳ್ಕೊಂಡ್ಲು. ನಾಳೆ ನರ್ಸಮ್ಮ ಬಂದಾಗ ಮಗು ಉಚ್ಚೆ ಉಯ್ಯುವಾಗ ಅಳುವುದನ್ನ ಹೇಳಬೇಕು ಎಂಬುದನ್ನು ನೆನೆಯುತ್ತಾ ನಿದ್ರೆಗೆ ಜಾರಿದಳು.

'ಅಮ್ಮಿ ಎಷ್ಟಾತು ಟೈಮು' ಎಂದು ನಂಜಣ್ಣ ಅನ್ನುತ್ತಲೇ 'ಅಯ್ಯೋ ಪುಣ್ಯಾತುಮ್ನೆ... ಅದೇನ್ ನಿಂದು ಸಡಗರ ಅಂತೀನಿ, ರಾತ್ರೆಲ್ಲ ಹಂದಿ ಕುಯ್ಯೋದ್ನೇ ಲೆಕ್ಕ ಮಾಡೋದ್ಬಿಟ್ಟು ಮಲ್ಗು. ಇನ್ನೂ ಬೆಳ್ಳಿ ಮೂಡೋಕೆ ಬಾಳ ಹೊತ್ತೈತೆ. ಈಗ್ಲೆ ಎದ್ದು ಏನ್ಮಾಡ್ತೀಯ' ಅಂದದ್ದಕ್ಕೆ, 'ಏ ನಾನ್ಮಲ್ಗೋದು ಅಂಗಿರ್ಲಿ, ನೀನೋಗಿ ಗೂಡಿಂದ ಹಂದಿನ ಆಚೆಗೀಚೆಗೆ ಬಿಟ್ಟೀಯ. ಆಮೇಲೆ ಅದನ್ನ ಹಿಡಿಯೋದು ಕಷ್ಟ ಆಗುತ್ತೆ. ಹಂದಿ ಹಿಡಿಯೋರು ಬರೋತಂಕ ಗೂಡಲ್ಲೇ ಇರ್ಲಿ, ತಿಳೀತ' ಎಂದು ಎಚ್ಚರಿಸಿದ.

'ಅಯ್ಯೋ ಹಂದಿ ಹಿಡಿಯೋ ಗ್ಯಾನವಾಗಿರೋ ನಿನಿಗೆ ಮತ್ತೆ ಹಂದಿ ಆಚೆಗೆ ಬಿಟ್ರೆ ನನ್ನ ಸುಮ್ನೆ ಬಿಟ್ಟೀಯಾ? ನಾನ್ಯಾಕೆ ಆಚೆಗೆ ಬಿಡ್ಲಿ. ಮಲಗಪ್ಪ ತಂದೆ' ಅಂತ ಒಂತರಾ ನಕ್ಷರ ಮಾಡಿ ಆಯಮ್ಮ ದನ ಕರೀನ ಮುಸುರೆ ನೋಡಲು ಕೊಟ್ಟಿಗೆ ಕಡೆಗೆ ಹೋಯಿತು. 'ಹೊತ್ತು ಹುಟ್ಟುತ್ತಾ ಬಂತು. ಲೇ ಪಾಪ ಹೋಗ್ಲಾ ಶೇಕುರ್ನು, ಕೊರಚರ ಶಂಕುರ್ನು ಮತ್ತೆ ಉಗ್ರಿ ಪರ್ಮ, ಚೋಟ್‌ನಿಂಗನ್ನೂ ಕರ್ಕಂಡು ಬಾ ಬೇಗ... ಹಂದಿ ಹಿಡಿಬೇಕು. ಬರುವಾಗ ಶೇಕ್ರುಂಗೆ ಮಚ್ಚು, ಕೈಗೊಡ್ಲಿ, ಅಂಗೆ ಚಾಕ್ನೂ ತಗಂಡ್‌ಬಾ ಅಂತ ಹೇಳೋಗು' ಎಂದು ಕಳುಹಿಸಿದನು. ಒಂದೇ ಉಸುರಿಗೆ ಎದ್ದು ಬಾಯಿ ತುಂಬ ನೀರು ತುಂಬಿಕೊಂಡು ಮುಕ್ಕಳಿಸಿ ಬಚ್ಚಲ ಮನೆಗೆ ಥೂ ಅಂತ ಉಗಿದ ನಂಜಣ್ಣ.

ರಾತ್ರಿ ಮಗೂನ ಉಚ್ಚೆ ಉಯ್ಸಕ್ಕೆ ಕಷ್ಟಪಡುತ್ತಿದ್ದ ಮಗಳ ಕೇಳಿದ, 'ಯಾಕವ್ವಾ, ಮೊಗ ರಾತ್ರಿಯೆಲ್ಲ ಅಳುತ್ತೆ. ಅದೇನು ನಿಮ್ಮವ್ವಂಗೆ ಹೇಳು' ಅಂತಂದ. ಅಷ್ಟರೊಳಗೆ ಊರು ಎಚ್ಚರಾಗಿತ್ತು. ಅದೇ ಟೈಮಿಗೆ ಹತಾರ ತಕ್ಕಂಡು ನಿಂಗನೂ ಬರುತ್ತಿದ್ದ. ಹೀಗೆ ಒಬ್ಬರಾದ ಮೇಲೆ ಒಬ್ಬರಂತೆ ಪರಮೇಶನು, ಕೊರಚರ ಶಂಕರನು, ಉಗ್ರಿ ಪರಮನು ಕಾಣಿಸಿಕೊಂಡರು. ಅಂಗೆ ಒಬ್ಬರಿಗೊಬ್ಬರು ಸೇರಿಕೊಂಡು ಬೆಳ್ ಬೆಳಿಗ್ಗೆ ಹಿಂಗೆ ಹತಾರ ಹಿಡಿದು ಬಂದರು.

ಆಗಿನ್ನೂ ಕಣ್ಣು ಉಜ್ಜುತ್ತಾ ಆಕಳಿಸಿ ಎದ್ದ ಊರು, ಊರಿನ ಒಂದಷ್ಟು ಹುಡುಗರು–ಮಕ್ಕಳು ಸೇರಿಕೊಂಡು ಜನಗಳ ಗುಜುಗುಜು ಶುರುವಾಗಿತ್ತು. 'ಲೇ ಪಾಪ ಹೋಗುರ್ಲಾ, ಆಮೇಲೆ ಬರ್ರಿ' ಅಂತ ನಂಜಣ್ಣ ಹೇಳ್ತಾನೇ ಇದ್ದ. ಹಂದಿ ಯಂಗಿಡೀತರೆ ಅಂತ ಹುಡುಗ್ರು ಮಕ್ಳು ನೋಡುತ್ತಾ ಕುಂತಿದ್ದರು. ತಾಯಮ್ಮ ರಾತ್ರಿ ಉಳಿದ ಮುದ್ದೆಗಳನ್ನು ಮಜ್ಜಿಗೆಯಲ್ಲಿ ಕಲಸಿ ಅಂಬಲಿ ಮಾಡಿ ಡಬ್ರಿಯಲ್ಲಿ ತುಂಬಿಕೊಂಡು ಹಂದಿಗೂಡಿನ ಪಕ್ಕ ಕೂತಿದ್ದಳು.

ಗೂಡಿಗೆ ಬಾಗಿಲಂತೆ ನಿಲ್ಲಿಸಿದ್ದ ಚಪ್ಪಟೆಕಲ್ಲು ಸಂದಿಯಿಂದ ಚೂಪು ಮುಸುಡಿ ಇಟ್ಟು ಮುಸ ಮುಸ ಅಂತ ಒಂದೇ ಸಮನೆ ವಾಸನೆ ಎಳೆಯುತ್ತಾ ಹಾರಾಡುತ್ತಿತ್ತು. ಗೂಡಿನಿಂದಾಚೆ ಇಟ್ಟಿದ್ದ ಅಂಬಲಿಯನ್ನು ಗಮನಿಸಿದ ಹಂದಿಯು ಆಚೆಗೆ ಬಿಟ್ಟರೆ ಒಂದೇ ಏಟಿಗೆ ಕುಡಿದೇ ಬಿಡುವೆ ಎನ್ನುವಂತೆ ಕಾತರಿಸುತ್ತಾ ಗೂಡೊಳಗೆ ಅತ್ತಿಂದಿತ್ತ ಬುಸುಗುಡುತ್ತಿತ್ತು.

ಗೂಡಿಗೆ ಒಂದು ಇಣುಕು ಹಾಕಿ ನೋಡಿದ ನಿಂಗ 'ಅಮ್ಮೋ, ನೀನು ಮುಸುರೆ ಇಟ್ಟು ಅದು ಕುಡೀತಿದ್ದಾಗ ಮೆಲ್ಲಗೆ ಅದ್ರ ಮೈಯ ತೂಬುರ್ಸು. ಅದು ನಿದ್ರೆ ಬಂದಂಗೆ ಮುಸ್ರೆ ಕುಡಿಬೇಕಾದ್ರೆ ಹಿಂದುಗಡೆಯಿಂದ ಬಂದು ಕಾಲಿಡೀತಿನಿ ಅದು ವದರೋದ್ರೊಳಗೆ ಅದರ ಕುತ್ತಿಗೆಗೆ ನೇಗ್ಲೀಚು ಇಟ್ಟು ಬಿಗಿಯಾಗಿ ಅದುಮಿಡಿರಿ. ಆಗ ನಾನು ಕಾಲ್ ಕಟ್ತೇನಿ. ಇದೇ ದಡಿಯಿಂದ ಎಲ್ಲ ಸೇರಿ ಹೊತ್ಕಂಡೋದ್ರಾತು. ಇಷ್ಟು ಹುಷಾರಾಗಿ ಕೆಲಸ ಆಗ್ಬೇಕು' ಅಂದು ಮತ್ತೆ ಎಚ್ಚರಿಸಿದ. 'ಆಯ ತಪ್ಪಿದ್ರೆ ಈ ಹಂದಿ ಹಿಡಿಯೋಕೆ ಆಗಲ್ಲ ಹುಷಾರು' ಅಂದ. ತಾಯಮ್ಮ ಅಂಬಲಿ ಹಿಡಿದು ಹಂದಿ ಹಿಡಿಯುವವರ ಸನ್ನೆಗಾಗಿ ಕಾಯುತ್ತಾ ಕುಳಿತಳು. ಹಂದಿ ಮಾತ್ರ ಇದ್ಯಾವುದನ್ನೂ ಲೆಕ್ಕಿಸದೆ ಗೂಡೊಳಗೆ ಅತ್ತಿಂದ ಇತ್ತಿಂದ ಓಡಾಡುತ್ತಲೇ ಇತ್ತು. ಹಂದಿ ಹಿಡಿಯಲು ಹತಾರ ಹಿಡಿದಿದ್ದವರೆಲ್ಲ ಒಂದೊಂದು ಆಯಕಟ್ಟಿನ ಜಾಗದಲ್ಲಿ ನಿಂತರು. ತಾಯಮ್ಮ ಡಬರಿಯಲ್ಲಿ ಮುಸುರೆ ಹಿಡಿದಿದ್ದಳು.

ನಂಜಣ್ಣನ ಮಗ ಪರಮೇಶ ನಿಂಗಣ್ಣನ ಆದೇಶದಂತೆ ಗೂಡಿಗೆ ಒಡ್ಡಿ ನಿಲ್ಲಿಸಿದ್ದ ಒಡ್ಡುಗಲ್ಲ ನಿಧಾನವಾಗಿ ಸರಿಸಿ ಸರಿಸಿ ಬಾಗಿಲು ತೆರೆದ. ಕಲ್ಲು ಸರಿಸಿದ್ದೇ ತಡ, ಗೂಡಿನಿಂದ ದಢಾರನೆ ಆಚೆಗೆ ನುಗ್ಗಿದ ಹಂದಿ ತಾಯಮ್ಮನ ಮೈಮೇಲೆ ನುಗ್ಗಿಬಿಡುವಂತೆ ಗುಡ್ರುಕ್ ಗುಡ್ರುಕ್ ಅನ್ನುತ್ತ ಸಿಕ್‌ಸಿಕ್ಕಿದ ಕಡೆಯೆಲ್ಲ ಮೂತಿ ಹಾಕಲು ಹೋಗಿ ಅವಳ ಕೈಯಲ್ಲಿದ್ದ ಮುಸುರೆ ಡಬ್ರಿ ನೆಲಕ್ಕೆ ಬಿತ್ತು. 'ಅಯ್ಯೋ' ಎನ್ನುತ್ತ ತಡಬಡಾಯಿಸಿದ ತಾಯಮ್ಮ ಡಬರಿಯ ಮೇಲೆತ್ತಿ ಇಡುವಷ್ಟರಲ್ಲಿ ಮುಕ್ಕಾಲು ಮುಸುರೆ ನೆಲದ ಪಾಲಾಗಿತ್ತು.

ಉಳಿದ ಮುಸುರೆಯನ್ನೇ ಹಂದಿಗೆ ತೋರಿಸಲು ತಾಯಮ್ಮ ಸಜ್ಜಾಗುತ್ತಿರುವಾಗ ನಂಜಣ್ಣನಿಗೆ ಪಿತ್ತ ನೆತ್ತಿಗೆ ಅಡರಿ 'ಇವಳವ್ವನ್ ಸರಿಯಾಗ್ ಕೈಲಿ ಡಬರಿ ಹಿಡಿಯಾಕೆ ಆಗಲಿಲ್ಲ' ಅನ್ನುತ್ತ ನೊರ ನೊರ ಹಲ್ಲು ಕಡಿಯುತ್ತಿದ್ದ. ತಾಯಮ್ಮ ಹಂದಿಗೆ ಡಬರಿ ತೋರಿಸುತ್ತಾ ಅದು ಉಳಿದ ಮುಸುರೆ ನೆಕ್ಕಕ್ಕೆ ಶುರುಮಾಡಿದ ಮೇಲೆ ಎಡಗೈ ಬೆರಳಲ್ಲಿ ಅದರ ಹಣೆಮುಟ್ಟಿ ಕೈಸವರುತ್ತಿದ್ದಳು. ಹಂದಿ ಕಣ್ಣು ಮುಚ್ಚಿ ಮುಸುರೆ ನೆಕ್ಕುತ್ತಾ ನೆಕ್ಕುತ್ತಾ ರುಚಿ ಸವಿಯುತ್ತಿದ್ದರೆ ನಿಂಗಣ್ಣ ಅದರ ಹಿಂದಿನ ಕಾಲುಗಳಿಗೆ ಗಬಕ್ಕನೆ ಕೈಹಾಕಿ ಹಿಡಿದ. ಹಂದಿಯು ಕಯ್ಯಯ್ಯೋ ಎಂದು ಎದ್ದು ಹೊರಳಾಡಿ ಇಡೀ ಊರಿಗೇ ಕೇಳುವಂತೆ ಅರಚತೊಡಗಿ ನಿಂಗಣ್ಣನನ್ನು ಗುಂಗಿಸಿ ಹಿಂದೆ ಮುಂದೆ ಎಳೆದಾಡಿ ಹಿಡಿತವ ಬಿಗಿ ಮಾಡಿ ಹಿಡಿಯೋದ್ರೊಳಗೆ ನುಗುಚಿಕೊಂಡು ಬಿದ್ದು ಎದ್ದು ಅರಚುತ್ತಾ ಕಿರುಚುತ್ತಾ ಅತ್ತಿಂದಿತ್ತ ಎಲ್ಲಾ ಕಾಲುಗಳನ್ನು ಆಡಿಸಿಕೊಂಡು ನಿಂಗಣ್ಣನನ್ನು ಮಕಾಡೆ ಮಲಗಿಸಿ ಓಡಿತು.

ಜನರ ಗುಂಪಿನೊಳಗೆ ಅಲ್ಲಲ್ಲಿ ಮಲಗಿದ್ದ ನಾಯಿಗಳು ಹಂದಿ ಭಯಂಕರವಾಗಿ ಅರಚುತ್ತಾ ಓಡಿಹೋಗುತ್ತಿದ್ದುದನ್ನು ಗಮನಿಸಿ ಅದರ ಬೆನ್ನಿಗೆ ಬಿದ್ದವು. ಆ ಪೂಜಾರಿ ಬಸಪ್ಪನ ನಾಯಿ ಹಂದಿಯ ಹಿಂದೆ ಓಡುತ್ತಿದ್ದ ಶಿವನ ಕಾಲಿಗೆ ಅಡ್ಡಬಂದು ಯಡವಟ್ಟು ಮಾಡಿತ್ತು. ಬಿದ್ದ ಶಿವನು ಹಂದಿಯನ್ನು ಬಿಟ್ಟು ನಾಯಿಯನ್ನ ಅಟ್ಟಾಡಿಸತೊಡಗಿದ. ಇದನ್ನ ಗಮನಿಸಿದ ರಾಮಕ್ಕ 'ನಾಯಿ ಏನು ಮಾಡ್ತು ಸುಮ್ಕೋಗ್ಲ' ಎಂದು ಗದರಿದ್ದರಿಂದ ಕೈಯಲ್ಲಿದ್ದ ಎತ್ತುಂಡಿಯನ್ನು ನೆಲಕ್ಕೆ ರಭಸವಾಗಿ ಎಸೆದು 'ಥೂ ಇವ್ನವ್ವನ್' ಎಂದು ಮೈಗಂಟಿಕೊಂಡಿದ್ದ ದೂಳ ಕೊಡವಿಕೊಂಡು ರೊಂಡಿಗೆ ಪೆಟ್ಟಾಗಿದ್ದರಿಂದ ಕುಂಟುತ್ತಲೇ ಓಡತೊಡಗಿದ.

ಈಚು ಹಿಡಿದು ಹಂದಿ ಅದುಮಿಡಿಯಲು ಕಾಯುತ್ತಿದ್ದ ಶಂಕ್ರಣ್ಣ ತಪ್ಪಿಸಿಕೊಂಡು ಓಡುತ್ತಿದ್ದ ಹಂದಿಯ ತಲೆಗೆ ಅದೇ ಈಚಿನಿಂದ ಡಬ್ ಅಂತ ಬಾರಿಸಿದ. ಆ ಏಟಿಗೆ ಹಂದಿ ಬಿದ್ದೆನೋ ಎದ್ದೆನೋ ಎನ್ನುವಂತೆ ಊರ ಸಂದಿಗೊಂದಿ ನುಗ್ಗಿ ವೇಗ ಹೆಚ್ಚಿಸಿಕೊಂಡು ನೆಗೆನೆಗೆದು ಓಡುತ್ತಿತ್ತು. ಅದರ ಬೆನ್ನಿಗೆ ಬಿದ್ದ ಜನ ಅಲ್ಲೋಯ್ತು, ಇಲ್ಬಂತು, ದುಂಡಿ ತಕಂಡಾಕುರ್ಲಾ, ಕಲ್ತಗಂಡು ತಲೆಗೊಡಿರ್ಲಾ, ಹೇ ಕಿವಿಬುರ್ಗಿಗೆ ಹೊಡಿರ್ಲಾ – ಹೀಗೆ ಒಬ್ಬೊಬ್ಬರೊಂದೊಂದು ಬಿರುಸಿನ ಮಾತು ಆಡುತ್ತಿದ್ದರು. ಇಡೀ ಊರೇ ಹಂದಿಯ ಹಿಂದೆ ಓಡಿತ್ತು. ಓಡುತ್ತಿದ್ದ ಹಂದಿಗೆ ಅದ್ಯಾರದೋ ಮನೆ ಮುಂದೆ ಸೀಳಿ ಹಾಕಿದ್ದ ವಳಕೆಸೌದೆಯನ್ನು ಅದ್ಯಾವನೋ ಓಡುತ್ತಿದ್ದವನೊಬ್ಬ ತೆಗೆದು ಆಕೇಬಿಟ್ಟ. ಅದೇ ದಾರಿಯಲ್ಲಿ ಬರುತ್ತಿದ್ದ ಈ ಊರಿನ ನೆಂಟ ಅಕಸ್ಮಾತ್ತಾಗಿ ಹಂದಿ ಅಟ್ಟಿಸಿಕೊಂಡು ಬರುತ್ತಿರುವುದನ್ನು ನೋಡಿ ಅಲ್ಲೇ ಇದ್ದ ಕಲ್ದುಂಡಿ ಕೈಗೆ ತಗಂಡು ಅದರ ರೊಂಡಿಗೆ ಬೀಸಿದ.

ಅಷ್ಟು ಹೊತ್ತಿಗಾಗಲೇ ಜನರ ಆಕರ್ಷಣೆಯ ಕೇಂದ್ರವಾಗಿಬಿಟ್ಟಿದ್ದ ಹಂದಿಯ ಓಡಿಸಾಟ ಅಲ್ಲಲ್ಲಿ ನಿಂತಿದ್ದವರೆಲ್ಲ ಸಿಕ್‌ಸಿಕ್ಕಿದ್ದನ್ನೇ ತೆಗೆದು ಅದರ ಮೇಲೆ ಎಸೆಯುವಂತೆ ಮಾಡಿತ್ತು. ಈ ನಡುವೆ ಅದೆಲ್ಲಿಂದಲೋ ಬಂದ ಬೇಟೆಯಾಡುವ ನಾಯಕರ ಗುಂಪು, ಕೊರಮರ ಗುಂಪು ಕಾಡುಹಂದಿಯ ಮೇಲೆ ಬೀಳುವಂತೆ ನಂಜಣ್ಣನ ಹಂದಿಯ ಮೇಲೆ ಬಿದ್ದರು. 'ಥೂ ಅದರ್ ನೆಗೆದ್ ಬಿದ್ದೋಗ, ಅದರ ಸೆಲೆಗೆಟ್ಟೋಗ' ಅಂತ ಒಬ್ಬೊಬ್ಬರೂ ಒಂದೊಂದು ಬೈಗುಳ ಬೈಯ್ಯುತ್ತಾ, ಅದೆಷ್ಟೇ ಪ್ರಯತ್ನಿಸಿದರೂ, ಗದ್ದೆ ಎಲ್ಲ ಸಿದುಕಿ ಮೈಯೆಲ್ಲಾ ಪರಚಿಕೊಂಡರೂ ಕೊನೆಗೆ ಹಂದಿ ಸಿಗದೆ, ಒಬ್ಬೊಬ್ಬರೆ ಗದ್ದೆ ಒಳಗಿನಿಂದ ಎದ್ದೆದ್ದು ಬುಳಬುಳನೆ ಹೊರ ಬರುತ್ತಿದ್ದರು. ಇಡೀ ಊರಿಗೆ ಊರೇ ತಲ್ಲಣಗೊಂಡು ಸ್ತಬ್ಧವಾಯಿತು. ಗೂಡಿನಲ್ಲಿದ್ದ ಹಂದಿಯ ಹಿಡಿಯಲಾರದವರು ಬಯಲಲ್ಲಿ ಹಿಡಿಯಲು ಸಾಧ್ಯವೇ ಎಂದು ಭವಿಷ್ಯ ನುಡಿದಿದ್ದರು. ಗದ್ದೆ, ಮಾಳ ಎಲ್ಲಾ ಸುತ್ತಿ ಬರುವಷ್ಟರಲ್ಲಿ ನೆರೆ ಊರುಗಳಲ್ಲಿ ರಂಜಕ ಕಥೆಗಳು ಹುಟ್ಟಿ ಅರಳತೊಡಗಿದವು.

ಎಲ್ಲರೊಟ್ಟಿಗೆ ಓಡಿ ದಣಿದ ಇಡೀ ಯೋಜನೆಯ ಹರಿಕಾರ ನಂಜಣ್ಣನ ಗಂಟಲು ಒಣಗಿ ಮುಖದಲ್ಲಿ ನೀರಿಳಿಯುತ್ತಿತ್ತು. ಕಟಬಾಯಲ್ಲಿ ನೀರು ಬತ್ತಿಹೋಗಿತ್ತು. ನಂಜಣ್ಣನ ಮುಖದಲ್ಲಿ ಹರಿಯುತ್ತಿದ್ದ ಬೆವರನ್ನು ಅವನ ಹೆಗಲ ಮೇಲಿದ್ದ ಟವಲ್ನಲ್ಲಿ ಒರಸಿದ ಶಂಕ್ರಣ್ಣ 'ಎಲ್ಲಿಗೆ ಹೋದಾಳಜ್ಜ...